## ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಡಿ/39/2022 ಬಹುಮಹಡಿಗಳ ಕಟ್ಟಡ,
ಮಂಡನಾಧಿಕಾರಿಗಳ ಶಾಖೆ, ಪಿ.ಒ. ಎ.ಆರ್.ಇ.17 ಡಾ: ಅಂಬೇಡ್ಕರ್ ವೀದಿ,ಬೆಂಗಳೂರು,
ದಿನಾಂಕ: 28/10/2022

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ ಶ್ರೀ ಎಸ್. ವಿ. ವೆಂಕಟರಂಗನ್, ಪಂಚಾಯತ್ ಕಾರ್ಯದರ್ಶಿ, ಗ್ರೇಡ್-1, ಬಂಡಿಕೊಡಿಗೆಹಳ್ಳಿ ಗ್ರಾಮ ಪಂಚಾಯಿತಿ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಇವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಲೋಕಾಯುಕ್ತ ಪೊಲೀಸ್ ಠಾಣೆ, ಬೆಂಗಳೂರು ನಗರ, ಬೆಂಗಳೂರು ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ವರದಿಯಲ್ಲಿ ಶ್ರೀ ಎಸ್. ವಿ. ವೆಂಕಟರಂಗನ್, ಪಂಚಾಯತ್ ಕಾರ್ಯದರ್ಶಿ, ಗ್ರೇಡ್-1, ಬಂಡಿಕೊಡಿಗೆಹಳ್ಳಿ ಗ್ರಾಮ ಪಂಚಾಯಿತಿ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಡಾ. ಅಶ್ವಿನಿ ಎಂ., ಪೊಲೀಸ್ ಉಪಾಧೀಕ್ಷಕರು, ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರಿಗೆ ಬಂದ ಮಾಹಿತಿಯ ಮೇರೆಗೆ ಈ ಬಗ್ಗೆ ರಹಸ್ಯ ಮಾಹಿತಿಯನ್ನು ಸಂಗ್ರಹಿಸಿ, ಸದರಿ ವರದಿಯನ್ನು ತಯಾರಿಸಿ ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ಸಲ್ಲಿಸಿರುತ್ತಾರೆ. ಸದರಿಯವರಿಂದ ಆದೇಶ ಪಡೆದು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ಇವರು ದೂರನ್ನು ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದು, ಎದುರುದಾರರು ಬಲ್ಲ ಮೂಲಗಳ ಆದಾಯಕ್ಕಿಂತ ಹೆಚ್ಚಿನ ಆಸ್ತಿಗಳನ್ನು ಹೊಂದಿರುತ್ತಾರೆಂದು ತನಿಖಾಧಿಕಾರಿಗಳು ವರದಿ ಸಲ್ಲಿಸಿದ ಮೇರೆಗೆ, ದಾಖಲಾತಿಗಳನ್ನು ಪರಿಶೀಲಿಸಿದಾಗ, ಎದುರುದಾರರು ಅವರ ಸೇವಾ ಅವಧಿಯಲ್ಲಿ ಖರೀದಿಸಿದ ಆಸ್ತಿಗಳ ಬಗ್ಗೆ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮಗಳನ್ನು

ಪಾಲಿಸದೆ ದುರ್ನಡತೆ ತೋರಿಸಿರುತ್ತಾರೆ. ಎದುರುದಾರರ ವಿರುದ್ಧ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ದೂರು ದಾಖಲಿಸಲು ಆದೇಶ ಮಾಡಿದ್ದು, ಅದರನ್ವಯ ಬೆಂಗಳೂರು ನಗರ ಲೋಕಾಯುಕ್ತ ಪೊಲೀಸ್ ಠಾಣೆಯ ಗುನ್ನೆ ನಂ. 13/2013 ರಲ್ಲಿ ಕಲಂ 13 (1)(ಇ) ಸಹ ಕಲಂ 13(2) ಪಿ.ಸಿ. ಕಾಯಿದೆ 1988 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

2) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ದಿನಾಂಕ 01/05/1990 ರಿಂದ ದಿ: 07/02/2013 ರ ವರೆಗೆ ಅವರ ಮತ್ತು ಅವರ ಪತ್ನಿಯ ಹೆಸರಿನಲ್ಲಿ ಈ ಕೆಳಕಂಡ ಸ್ಥಿರಾಸ್ತಿ ಹಾಗೂ ಚರಾಸ್ತಿಗಳನ್ನು ಸಂಪಾದಿಸಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ.

| | |
|---|---|
| 1 | ಎದುರುದಾರರು 1990-91 ರಿಂದ 2008-09 ರ ವರೆಗೆ ವರ್ಷಾವಾರು ಆಸ್ತಿ ಮತ್ತು ದಾಯಿತ್ವ ಪಟ್ಟಿಗಳ ವಿವರಗಳನ್ನು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಕಳುಹಿಸಿರುವುದಿಲ್ಲ. |
| 2 | ಎದುರುದಾರರು ಅವರ ಹೆಂಡತಿ ಶ್ರೀಮತಿ ಟಿ. ವಿ. ಮಂಜುಳಾರವರ ಹೆಸರಿನಲ್ಲಿ ಸರ್ವೆ ನಂ. 40/3 ರಲ್ಲಿ 1 ಎಕರೆ, 11 ಗುಂಟೆ ಮತ್ತು 40/5 ರಲ್ಲಿ 1 ಎಕರೆ 12 ಗುಂಟೆ ಕಾಚಹಳ್ಳಿ ಗ್ರಾಮ, ತೂಬಗೆರೆ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ದಿನಾಂಕ 07/10/2004 ರಂದು ರೂ. 1,29,000/- ಗಳಿಗೆ ಜಮೀನನ್ನು ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಜಮೀನನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. |
| 3 | ಎದುರುದಾರರು ಅವರ ಹೆಂಡತಿ ಶ್ರೀಮತಿ ಟಿ. ವಿ. ಮಂಜುಳಾರವರ ಹೆಸರಿನಲ್ಲಿ ಸರ್ವೆ ನಂ. 15/2 ರಲ್ಲಿ 0 ಎಕರೆ, 37 ಗುಂಟೆ ತೂಬಗೆರೆ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜಮೀನನ್ನು ದಿನಾಂಕ 24/04/2004 ರಂದು ರೂ. 55,500/- ಗಳಿಗೆ ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಜಮೀನನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ |

| | |
|---|---|
| | (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. |
| 4 | ಎದುರುದಾರರು ಅವರ ಹೆಂಡತಿ ಶ್ರೀಮತಿ ಟಿ. ವಿ. ಮಂಜುಳಾರವರ ಹೆಸರಿನಲ್ಲಿ ಸರ್ವೆ ನಂ. 39/1 ಕಾಚಹಳ್ಳಿ ಗ್ರಾಮ, 1 ಎಕರೆ, 27 ಗುಂಟೆ ಕಾಚಹಳ್ಳಿ ಗ್ರಾಮ, ತೂಬಗೆರೆ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜಮೀನನ್ನು ದಿನಾಂಕ 07/02/2013 ರಂದು ರೂ. 3,35,000/- ಗಳಿಗೆ ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಜಮೀನನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. |
| 5 | ಎದುರುದಾರರು ಅವರ ಹೆಂಡತಿ ಶ್ರೀಮತಿ ಟಿ. ವಿ. ಮಂಜುಳಾರವರ ಹೆಸರಿನಲ್ಲಿ ಸರ್ವೆ ನಂ. 13/1 ರಲ್ಲಿ 0 ಎಕರೆ, 22 ಗುಂಟೆ ಮತ್ತು 14/1 ರಲ್ಲಿ 0 ಎಕರೆ 14 ಗುಂಟೆ ಕಾಚಹಳ್ಳಿ ಗ್ರಾಮ, ತೂಬಗೆರೆ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜಮೀನನ್ನು ದಿನಾಂಕ 18/08/2007 ರಂದು ರೂ. 2,25,000/- ಗಳಿಗೆ ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಜಮೀನನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. |
| 6 | ಎದುರುದಾರರು ಅವರ ಹೆಂಡತಿ ಶ್ರೀಮತಿ ಟಿ. ವಿ. ಮಂಜುಳಾರವರ ಹೆಸರಿನಲ್ಲಿ ಸರ್ವೆ ನಂ. 38/3 ರಲ್ಲಿ 0 ಎಕರೆ, 17 ಗುಂಟೆ ಕಾಚಹಳ್ಳಿ ಗ್ರಾಮ, ತೂಬಗೆರೆ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜಮೀನನ್ನು ದಿನಾಂಕ 02/07/2003 ರಂದು ರೂ. 22,000/- ಗಳಿಗೆ ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಜಮೀನನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. |

| | |
|---|---|
| 7 | ಎದುರುದಾರರು ಅವರ ಹೆಂಡತಿ ಶ್ರೀಮತಿ ಟಿ. ವಿ. ಮಂಜುಳಾರವರ ಹೆಸರಿನಲ್ಲಿ ದೊಡ್ಡಬಳ್ಳಾಪುರ ನಗರದ 4ನೇ ವಾರ್ಡ್, ಗಂಗಾಧರಪುರದ 3ನೇ ಹಂತಕ್ಕೆ ಸೇರಿದ ಮಾಜಿ ಪುರಸಭೆ ಖಾತಾ ನಂ. 5422/5422, ಹಾಲಿ ನಗರಸಭಾ ಖಾತೆ ನಂ. 4082/5422/27 ನಿವೇಶನವನ್ನು ದಿನಾಂಕ 17/05/2004 ರಂದು ರೂ. 1,44,000/- ಗಳಿಗೆ ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ನಿವೇಶನವನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. |
| 8 | ಎದುರುದಾರರು ಅವರ ಹೆಂಡತಿ ಶ್ರೀಮತಿ ಟಿ. ವಿ. ಮಂಜುಳಾರವರ ಹೆಸರಿನಲ್ಲಿ ಸರ್ವೆ ನಂ. 219, ಗುಯ್ಯಲಹಳ್ಳಿ ಗ್ರಾಮ, ಮಂಚೇನಹಳ್ಳಿ ಹೋಬಳಿ, ಗೌರಿಬಿದನೂರು ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜಮೀನನ್ನು ದಿನಾಂಕ 09/03/2007 ರಂದು ರೂ. 2,00,000/- ಗಳಿಗೆ ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಜಮೀನನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. |
| 9 | ಎದುರುದಾರರು ಅವರ ಹೆಂಡತಿ ಶ್ರೀಮತಿ ಟಿ. ವಿ. ಮಂಜುಳಾರವರ ಹೆಸರಿನಲ್ಲಿ ದೊಡ್ಡಬಳ್ಳಾಪುರ ನಗರದ 4ನೇ ವಾರ್ಡ್, 4ನೇ ಹಂತಕ್ಕೆ ಸೇರಿದ ಹಳೆ ಖಾತಾ ನಂ. 5451/5451, ವಿ. ಎಸ್. ನಂ. 13, ಹಾಲಿ ಖಾತೆ ನಂ. 2305/22/5451, ನಿವೇಶನ ಸಂಖ್ಯೆ 13, (40 * 30) ನ್ನು ದಿನಾಂಕ 22/05/2003 ರಂದು ರೂ. 72,000/-ಗಳಿಗೆ ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ನಿವೇಶನವನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. |
| 10 | ಎದುರುದಾರರು ಅವರ ಹೆಂಡತಿ ಶ್ರೀಮತಿ ಟಿ. ವಿ. ಮಂಜುಳಾರವರ ಹೆಸರಿನಲ್ಲಿ ನಾಯ್ಕರಂಡಹಳ್ಳಿ ಗ್ರಾಮ, ತೂಬಗೆರೆ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಸರ್ವೆ ನಂ. 15 ಹಾಗೂ ಹಾಲಿ |

| | |
|---|---|
| | ಸರ್ವೆ ನಂ. 51 ರಲ್ಲಿ 2 ಎಕರೆ ಜಮೀನನ್ನು ದಿನಾಂಕ 08/06/2001 ರಂದು ರೂ. 90,000/- ಗಳಿಗೆ ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಜಮೀನನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. |
| 11 | ಎದುರುದಾರರು ಅವರ ಹೆಂಡತಿ ಶ್ರೀಮತಿ ಟಿ. ವಿ. ಮಂಜುಳಾರವರ ಹೆಸರಿನಲ್ಲಿ ತೂಬಗೆರೆ ಗ್ರಾಮ, ತೂಬಗೆರೆ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸರ್ವೆ ನಂ. 13/1 ರಲ್ಲಿ 0.23 ಗುಂಟೆ ಮತ್ತು ಸರ್ವೆ ನಂ. 14/1 ರಲ್ಲಿ 0.15 ಗುಂಟೆ ಜಮೀನನ್ನು ದಿನಾಂಕ 02/07/2003 ರಂದು ರೂ. 57,000/- ಗಳಿಗೆ ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಜಮೀನುಗಳನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. |
| 12 | ಎದುರುದಾರರು ಅವರ ಹೆಸರಿನಲ್ಲಿ ಕೋಗಿಲು ಗ್ರಾಮ, ಯಲಹಂಕ ಹೋಬಳಿ, ಉತ್ತರ ತಾಲ್ಲೂಕು, ಬೆಂಗಳೂರು ಸ್ವತ್ತಿನ ಸಂಖ್ಯೆ 12 ಮತ್ತು 13 ಯಲಹಂಕ ನಗರ ಸಭೆ ಮುನ್ಸಿಪಲ್ ಅಸೆಸ್‌ಮೆಂಟ್ ಖಾತಾ ನಂ. 110/9ಸಿ ರಲ್ಲಿ 60 * 40 ನಿವೇಶನವನ್ನು ದಿನಾಂಕ 28/08/2003 ರಂದು ರೂ. 2,40,000/- ಗಳಿಗೆ ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ನಿವೇಶನವನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. |
| 13 | ಎದುರುದಾರರು ಅವರ ಹೆಸರಿನಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಅಗ್ರಹಾರ ಲೇಔಟ್, 36ನೇ ನಿವೇಶನ, ಪಂಚಾಯತಿ ಖಾನೆಷುಮಾರಿ ನಂ. 75:36 (35 * 35) ನಿವೇಶನವನ್ನು ದಿನಾಂಕ 17/11/1999 ರಂದು ರೂ. 49,000/- ಗಳಿಗೆ ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ನಿವೇಶನಗಳನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 |

| | |
|---|---|
| | ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. |
| 14 | ಎದುರುದಾರರು ತನ್ನ ಆಸ್ತಿ ಮತ್ತು ದಾಯಿತ್ವ ಪಟ್ಟಿಯಲ್ಲಿ ಘೋಷಿಸಿಕೊಳ್ಳದಿರುವ ಆಸ್ತಿಗಳು:-ಟಯೋಟ ಕ್ವಾಲೀಸ್ ಕಾರ್ ವಾಹನ ಸಂಖ್ಯೆ ಕೆಎ-04-ಎಂಆರ್-2115 ನ್ನು ಖರೀದಿಸಿದ ನಂತರ ಸಕ್ಷಮ ಪ್ರಾಧಿಕಾರಕ್ಕೆ ನಿಯಮ 23 (3) ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ಪ್ರಸ್ತುತ ನಿಯಮ 24(4) ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 2021 ನೇದರ ಪ್ರಕಾರ ವರದಿ ಮಾಡಿರುವುದಿಲ್ಲ. |
| 15 | ಎದುರುದಾರರು ಹಾಗೂ ಅವರ ಪತ್ನಿ ಶ್ರೀಮತಿ ಬಿ. ವಿ. ಮಂಜುಳಾರವರು ತೆರಿಗೆ ಇಲಾಖೆಗೆ ಐ.ಟಿ. ರಿಟರ್ನ್ಸ್ ಸಲ್ಲಿಸಿರುವುದಿಲ್ಲ. |

3) ತನಿಖಾಧಿಕಾರಿಯವರು ಸಂಗ್ರಹಿಸಿದ ದಾಖಲೆಗಳಿಂದ ಎದುರುದಾರರು ಕಾನೂನು ಸಮ್ಮತ ಆದಾಯಕ್ಕಿಂತ ಅಸಮತೋಲನವಾಗಿ ಆಸ್ತಿಗಳನ್ನು ಎದುರುದಾರರ ಮತ್ತು ಅವರ ಪತ್ನಿಯ ಹೆಸರಿನಲ್ಲಿ ಹೊಂದಿರುವುದು ಹಾಗೂ ಅನುಮತಿ ಇಲ್ಲದೆ ಸ್ಥಿರಾಸ್ತಿ/ಚರಾಸ್ತಿಯನ್ನು ಖರೀದಿಸಿರುವುದು ಹಾಗೂ ಇತರೆ ಅಂಶಗಳು ಎದುರುದಾರರು ನಿಯಮಗಳನ್ನು ಪಾಲಿಸದೇ ಇರುವುದು ಎದುರುದಾರರ ದುರ್ನಡತೆಯನ್ನು ತೋರಿಸುತ್ತದೆ.

4) ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ಸಲ್ಲಿಸಲು ದಿನಾಂಕ 15/02/2022 ರಿಂದ ಸಾಕಷ್ಟು ಕಾಲಾವಕಾಶವನ್ನು ನೀಡಿದರೂ ಸಹ ಇಲ್ಲಿಯವರೆಗೂ ತಮ್ಮ ಸಮಜಾಯಿಷಿಯನ್ನು ನೀಡಿರುವುದಿಲ್ಲ. ಆದ್ದರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಸಲ್ಲಿಸದೇ ಇರುವುದೂ ಕೂಡ ಎದುರುದಾರರ ಕರ್ತವ್ಯ ಲೋಪವೆಂದು ಪರಿಗಣಿಸಬಹುದಾಗಿದೆ. ಆದ್ದರಿಂದ ಈ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

5) ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿ ವಿವರಗಳನ್ನು ಪರಿಶೀಲಿಸಲಾಗಿ ಎದುರುದಾರರು ತನಿಖೆ ಕಾಲದಲ್ಲಿ ಯಾವುದೇ ಸ್ಥಿರಾಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿಯನ್ನು ಪಡೆಯದೆ ಕರ್ತವ್ಯ ಲೋಪವೆಸಗಿ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ನಿಯಮ 23 (2)(3) ಕರ್ನಾಟಕ ನಾಗರೀಕ ಸೇವಾ (ನಡತೆ)

ನಿಯಮಗಳು 1966 ರ (ಪ್ರಸ್ತುತ ನಿಯಮ 24 (3)(4) ರನ್ವಯ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮಗಳನ್ನು ಪಾಲಿಸದೆ ಕರ್ತವ್ಯ ಲೋಪವೆಸಗಿರುವುದು ಮತ್ತು ಪ್ರಸ್ತುತ ಕ.ನಾ.ಸೇ.(ನಡತೆ) ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

6) ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು, ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಸದರಿಯವರು ತಮ್ಮ ವಿರುದ್ಧದ ನಡವಳಿಯನ್ನು ಕೈ ಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

7) ಆದ್ದರಿಂದ, ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗುತ್ತಿದೆ.

(i) ಎದುರುದಾರರ ವಿರುದ್ಧ ಅಸಮತೋಲನ ಆಸ್ತಿಯನ್ನು ಹೊಂದಲು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಮತ್ತು ನಂತರದಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸದೆ ಇರುವ ವಿಚಾರವಾಗಿ ಮಾತ್ರ ಇಲಾಖಾ ವಿಚಾರಣೆ ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ ಹಾಗೂ

(ii) ಭಾರತದ ಸರ್ವೋಚ್ಛ ನ್ಯಾಯಾಲಯದ ತೀರ್ಪು AIR 1978 of Hon'ble Supreme Court, page 3047, State of Karnataka v/s Kempaiah, ಈ ಕೇಸಿನಲ್ಲಿ ಹೇಳಿರುವಂತೆ ಎದುರುದಾರರು ಕಾನೂನು

ಸಮ್ಮತದ ಆದಾಯಕ್ಕಿಂತ ಅಸಮತೋಲನ ಆದಾಯವನ್ನು ಹೇಗೆ ಹೊಂದಿದರು ಎಂಬುದರ ಬಗ್ಗೆ ವಿಚಾರಣೆ ನಡೆಸಲು ಅವಕಾಶವಿರುವುದಿಲ್ಲ. ಆದುದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದ ವಿಚಾರಣೆಯನ್ನು ಸರ್ಕಾರೀ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957 ರ ಅಡಿಯಲ್ಲಿ ವಿಚಾರಣೆ ಮಾಡಲು ಕ್ರಮ ಕೈಗೊಳ್ಳಬಹುದಾಗಿದೆ.

8) ಎದುರುದಾರರಾದ ಶ್ರೀ ಎಸ್. ವಿ. ವೆಂಕಟರಂಗನ್, ಪಂಚಾಯತ್ ಕಾರ್ಯದರ್ಶಿ, ಗ್ರೇಡ್-1, ಬಂಡಿಕೊಡಿಗೆಹಳ್ಳಿ ಗ್ರಾಮ ಪಂಚಾಯಿತಿ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ರವರು ದಿನಾಂಕ 31/07/2029 ರಂದು ನಿವೃತ್ತಿ ಹೊಂದುವವರಾಗಿರುತ್ತಾರೆ.

9) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ <u>ಮೂರು ತಿಂಗಳೊಳಗೆ</u> ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.